# 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| ಎಸ್ ಸಿ : | 167/2021 |
|---|---|

| | | |
|---|---|---|
| ಸಾಕ್ಷಿದಾರರ ಹೆಸರು | ಶ್ರೀ ಎನ್.ಸೋಮರಾಜು | |
| ತಂದೆಯ ಹೆಸರು | ಶ್ರೀ ನಂಜೇಗೌಡ | ಸಾಕ್ಷಿಗೆ **ದಿಃ 06.02.2024** ರಂದು ಪ್ರಮಾಣ ವಚನ ಭೋದಿಸಲಾಯಿತು. |
| ವಯಸ್ಸು | 46 ವರ್ಷ | |
| ಉದ್ಯೋಗ | ಗ್ರಾಮ ಪಂಚಾಯ್ತಿ ಸದಸ್ಯ,ಕೇಬಲ್ ಆಪರೇಟರ್ | ಪಿ.ಡಬ್ಲ್ಯೂ–5 |
| ವಾಸ ಸ್ಥಳ | ನುಗಹಳ್ಳಿ ಕೊಪ್ಪಲು ಗ್ರಾಮ. ಟಿ.ನರಸೀಪುರ ತಾಲ್ಲೂಕು. | ಸಿ.ಡಬ್ಲ್ಯೂ–7 |

**ಮುಖ್ಯ ವಿಚಾರಣೆ:– ಮಾನ್ಯ ಸರ್ಕಾರಿ ಅಭಿಯೋಜಕರಿಂದಃ–**

1. ನನ್ನ ಸ್ವಂತ ಊರು ನುಗಹಳ್ಳಿ ಕೊಪ್ಪಲು. ಮೃತ ಮಹದೇವಮ್ಮ ನಮ್ಮ ಊರಿನವರು ಮತ್ತು ಚಾಸಾ–4 ಅವರ ಪತ್ನಿ, ಚಾಸಾ–1 ಅವರು ಚಾಸಾ–4 ಅವರ ಮಗ. ಚಾಸಾ–8 ನಮ್ಮ ಗ್ರಾಮದವರು ಮತ್ತು ಪರಿಚಯ ಇದೆ. ನಾನು ಕಳೆದ 8 ವರ್ಷಗಳಿಂದ ಹೆಗ್ಗೂರು ಗ್ರಾಮ ಪಂಚಾಯ್ತಿಯಲ್ಲಿ ಸದಸ್ಯ ಇದ್ದೇನೆ. ನುಗಹಳ್ಳಿ ಕೊಪ್ಪಲು ಗ್ರಾಮದಿಂದ 150 ಮೀ ದೂರ ಇರುವ ಕರಿಕಲ್ಲು ಬೋರೆ ಹತ್ತಿರ ಮಹದೇವಮ್ಮ ಕೊಲೆಯಾಗಿ ಮೃತಪಟ್ಟಿದ್ದರು. ಕರಿಕಲ್ಲು ಬೋರೆ ಸರ್ಕಾರಿ ಗೋಮಾಳ ಜಾಗ ಆಗಿದ್ದು, ದನ, ಕರು, ಎಮ್ಮೆಗಳನ್ನು ಮೇಯಿಸುತ್ತಾರೆ.

2. ನಿಪಿ–4 ರಲ್ಲಿ ನಿಪಿ–4(ಬಿ) ನಲ್ಲಿ ನನ್ನ ಸಹಿ ಇದೆ. ದಿಃ 18.08.2020 ರಂದು ಮೃತ ದೇಹ ಇದ್ದ ಸ್ಥಳ ಕರಿಕಲ್ಲು ಬೋರೆ ಹತ್ತಿರ ಸಹಿ ಮಾಡಿದ್ದೇನೆ. ಕರಿಕಲ್ಲು ಬೋರೆ 150 ಮೀಟರ ದೂರದಲ್ಲಿ ನಾನು ರಸ್ತೆ ಕಾಮಗಾರಿಯನ್ನು ಮಾಡಿಸುತ್ತಿದ್ದೆ ಮತ್ತು ವಿಷಯ

ತಿಳಿದು ಸ್ವತಃ ಸ್ಥಳಕ್ಕೆ ಹೋಗಿದ್ದೇನೆ. ಕರಿಕಲ್ಲು ಬೋರೆ ಹತ್ತಿರ ಊರಿನ ಸಾಕಷ್ಟು ಗ್ರಾಮಸ್ಥರು ಮತ್ತು ನನಗೆ ಪರಿಚಯ ಇದ್ದ ಚಾಸಾ–1 ಮತ್ತು ಚಾಸಾ–8 ಸಹ ಇದ್ದರು. ನಮ್ಮ ಹೊರತಾಗಿ ಪೊಲೀಸರು, ವೈದ್ಯರು ಮತ್ತು ರಸಾಯನಿಕ ತಜ್ಞರು ಸ್ಥಳಕ್ಕೆ ಬಂದಿದ್ದರು. ಪೊಲೀಸರು ಸ್ಥಳ ಮಹಜರ ಮಾಡುವ ಬಗ್ಗೆ ನನಗೆ ಮತ್ತು ಚಾಸಾ–8 ಅವರಿಗೆ ಮಾಹಿತಿ ಕೊಟ್ಟು ಕರೆದಿದ್ದರು.

3. ಪೊಲೀಸರು ಸ್ಥಳಕ್ಕೆ ಬಂದಾಗ ಅಂದಾಜು ಸಂಜೆ 5.30 ಆಗಿತ್ತು. ಮಹಜರನ್ನು ಸಂಜೆ 7.15 ರಿಂದ 8.30 ವರೆಗೆ ಮಾಡಿದ್ದಾರೆ. ಪೊಲೀಸರ ಕೋರಿಕೆ ಮೇರೆಗೆ ಕತ್ತಲು ಆಗಿದ್ದರಿಂದ ಮತ್ತು ನಾನು ಪಂಚಾಯ್ತಿ ಸದಸ್ಯ ಇದ್ದ ಕಾರಣ ಮೂರು ಗ್ಯಾಸ್ ಲೈಟ್ ವ್ಯವಸ್ಥೆ ಮಾಡಿಕೊಟ್ಟಿದ್ದೇನೆ. ಮೃತದೇಹದ ತಲೆಯ ಹಿಂಭಾಗ ಕುತ್ತಿಗೆ ಬಳಿ ಹಸಿರು ಬಣ್ಣದ ಟವಲ್ ಇತ್ತು ಮತ್ತು ರಕ್ತದ ಕಲೆ ಆಗಿತ್ತು. ಶವ ಇದ್ದ ಸ್ಥಳದಿಂದ ಗರಿಕೆ ಮಿಶ್ರಿತ ರಕ್ತ ಸಹಿತ ಮಣ್ಣನ್ನು ಮತ್ತು ಗರಿಕೆ ಮಿಶ್ರಿತ ರಕ್ತ ರಹಿತ ಮಣ್ಣನ್ನು ಪೊಲೀಸರು ತನಿಖೆ ಸಲುವಾಗಿ ವಶಕ್ಕೆ ಪಡೆದಿದ್ದರು. ಶವ ಇದ್ದ ಸ್ಥಳದಿಂದ 15 ಅಡಿ ದೂರದಲ್ಲಿ ರಕ್ತ ಸಹಿತ ಮಣ್ಣನ್ನು ಮತ್ತು ರಕ್ತ ರಹಿತ ಮಣ್ಣನ್ನು ಪೊಲೀಸರು ತನಿಖೆ ಸಲುವಾಗಿ ವಶಕ್ಕೆ ಪಡೆದಿದ್ದರು. ಶವ ಇದ್ದ ಸ್ಥಳದಿಂದ 27 ಅಡಿ ದೂರದಲ್ಲಿ ಕೆಂಪು ಬಣ್ಣದ 7 ಬಳೆಯ ಚೂರುಗಳು ಹಾಗೂ ರಕ್ತ ಸಹಿತ ಮಣ್ಣನ್ನು ಮತ್ತು ರಕ್ತ ರಹಿತ ಮಣ್ಣನ್ನು ಪೊಲೀಸರು ತನಿಖೆ ಸಲುವಾಗಿ ವಶಕ್ಕೆ ಪಡೆದಿದ್ದರು. ಇವುಗಳನ್ನು ಡಬ್ಬದಲ್ಲಿ ಶೇಖರಿಸಿ 'ಪಿ' ಎಂದು ಗುರುತಿಸಿ ನಾವುಗಳು ಸಹಿ ಮಾಡಿದ ಚೀಟಿಗಳನ್ನು ಅಂಟಿಸಿದ್ದಾರೆ.

4. ಶವ ಪೂರ್ವ, ಪಶ್ಚಿಮವಾಗಿ ಮುಖ ಮೇಲೆ ಮಾಡಿ ಬಿದ್ದಿತ್ತು. ಶವದ ಮೇಲೆ ನೇರಳೆ ಬಣ್ಣದ ಸೀರೆ, ಕಾಫಿ ಬಣ್ಣದ ರವಿಕೆ ಮತ್ತು ಹಳದಿ ಬಣ್ಣದ ಲಂಗ ಇತ್ತು. ತಲೆಯ ಹಿಂಭಾಗ, ಹಣೆಯ ಮೇಲೆ ರಕ್ತದ ಗಾಯಗಳು ಇತ್ತು. ಕುತ್ತಿಗೆಯ ಬಳಿ ದಾರದಿಂದ ಬಿಗಿದ ಗಾಯದ ಗುರುತು ಇತ್ತು. ಶವ ಇದ್ದ ಸ್ಥಳದಲ್ಲಿ ಆಳು ಎತ್ತರದ ಮುಳ್ಳಿನ ಗಿಡ ಕಂಟಿಗಳು ಇತ್ತು. ಮಣ್ಣಿನ ಕಚ್ಚಾ ರಸ್ತೆಯಿಂದ 15 ಅಡಿ ದೂರದಲ್ಲಿ ಶವ ಇತ್ತು. ನಾನು ವ್ಯವಸ್ಥೆ ಮಾಡಿದ ಗ್ಯಾಸ್ ಲೈಟ್ ಬೆಳಕಿನಲ್ಲಿ ಮಹಜರನ್ನು ಬರೆದಿದ್ದಾರೆ. ನಿಪಿ–4 ರ ಕಾಲದಲ್ಲಿ ನನಗೆ ಈಗ ತೋರಿಸಿದಂತೆ ನಿಪಿ–5 ರಿಂದ 8 ಪೋಟೋಗಳನ್ನು ತೆಗೆದಿದ್ದಾರೆ. ನಿಪಿ–6 ರಿಂದ 8 ಪೋಟೋಗಳಲ್ಲಿ

ನಾನು, ಚಾಸಾ–8, ಪೊಲೀಸ್ ಅಧಿಕಾರಿ, ಸಹಾಯಕ ಸಿಬ್ಬಂದಿ ಮತ್ತು ಡಾಕ್ಟರ್ ಸುಜಾತ್ ಇದ್ದಾರೆ. ನಿಪಿ–4 ರ ಕಾಲದಲ್ಲಿ 8–9 ಜನ ಇದ್ದೆವು. ಶವ ಇದ್ದ ಸ್ಥಳವನ್ನು ಚಾಸಾ–1 ತೋರಿಸಿದ್ದರು. ಚಾಸಾ–1 ಅವರು ದುಃಖದಲ್ಲಿ ಮತ್ತು ನಿತ್ರಾಣ ಇದ್ದ ಕಾರಣ ಪೋಟೋಗೆ ನಿಂತುಕೊಂಡಿಲ್ಲ. ನಿಪಿ–4 ರ ಕಾಲದಲ್ಲಿ ವಶಕ್ಕೆ ಪಡೆದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ನನಗೆ ಈಗ ತೋರಿಸಿದ ವಸ್ತುಗಳನ್ನು ನಾನು ಗುರುತಿಸಿದ್ದು ಇವುಗಳನ್ನು ಈಗಾಗಲೇ ಎಂ.ಓ–1 ರಿಂದ 8 ಎಂದು ಗುರುತಿಸಲಾಗಿದೆ. ಎಂ.ಓ–1 ರಿಂದ 8 ವಸ್ತುಗಳ ಮೇಲೆ ನಾನು ಸಹಿ ಮಾಡಿದ ಚೀಟಿಗಳು ಇದೆ.

**<u>ಪಾಟೀಸವಾಲು :– ಆರೋಪಿಗಳ ಪರ ಶ್ರೀ ವಿ.ಬಿ.ಎನ್ ವಕೀಲರಿಂದಃ–</u>**

5. ಚಾಸಾ–1 ನಮ್ಮ ಗ್ರಾಮದವರು ಆದ ಕಾರಣ ಪರಿಚಯ ಇದೆ. ನಿಪಿ–4 ಮಹಜರ ಅಂಶಗಳನ್ನು ನಾನು ಹೇಳಿ ಬರೆಸಿಲ್ಲ. ನಾನು ಸ್ಥಳಕ್ಕೆ ಹೋಗುವ ಮೊದಲು ಪೊಲೀಸರು ಸ್ಥಳಕ್ಕೆ ಬಂದಿದ್ದರು. ಶವ ಇದ್ದ ಸ್ಥಳದ ಸುತ್ತ ಮುತ್ತಲೂ ಪೊಲೀಸರು ಪರಿಶೀಲನೆ ಮಾಡಿದ್ದಾರೆ ಎಂದರೆ ಸರಿ. ಶವ ಇದ್ದ ಸ್ಥಳದಿಂದ 2–3 ಕಿ.ಮೀ ಸುತ್ತಲೂ ಪೊಲೀಸರು ಹುಡುಕಾಟ ಮಾಡಿದ್ದಾರೆ ಎಂದರೆ ಸಾಕ್ಷಿದಾರರು ತನ್ನ ಸಮಕ್ಷಮ ಹುಡುಕಾಟ ಮಾಡಿಲ್ಲ ಎಂದು ನುಡಿಯುತ್ತಾರೆ. ಚಾಸಾ–1 ಅವರು ನ್ಯಾಯಾಲಯ ಆವರಣಕ್ಕೆ ಬಂದಿದ್ದಾರೆ ಎಂದರೆ ಸರಿ. ಚಾಸಾ–1 ಅವರು ನನಗೆ ಸಾಕ್ಷಿ ಹೇಳಬೇಕು ಎಂದು ಹೇಳಿ ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿಯಲ್ಲ. ಚಾಸಾ–1 ಅವರು ಹೇಳಿದಂತೆ ನಾನು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಚಾಸಾ–1 ಅವರು ಪೋಟೋ ಕಾಲದಲ್ಲಿ ನಿಲ್ಲುವ ಸ್ಥಿತಿಯಲ್ಲಿ ಇರಲಿಲ್ಲ ಎಂದು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ನಿಪಿ–4 ರ ಕಾಲದಲ್ಲಿ ನಾನು ಸ್ಥಳದಲ್ಲಿ ಇರಲಿಲ್ಲ ಮತ್ತು ಸ್ಥಳದಲ್ಲಿ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ದಿಃ 03.09.2020 ರಂದು ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ತನಿಖಾಧಿಕಾರಿ ಜೊತೆ 1–2 ಸಿಬ್ಬಂದಿಗಳು ಇದ್ದರು ಮತ್ತು ಅವರು ಸ್ಥಳದಲ್ಲಿ ಹುಡುಕಾಟ ಮಾಡಿದ್ದಾರೆ. ನಾನು ಈಗಲೂ ಪಂಚಾಯ್ತಿ ಸದಸ್ಯ ಇದ್ದೇನೆ. ನಾನು ಚಾಸಾ–1 ಅವರ ಹೇಳಿಕೆ ಮೇರೆಗೆ ಆರೋಪಿಗಳಿಗೆ ತೊಂದರೆ ಮಾಡಲು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ:– ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು